ನಮಗೆ ಕೊಡುತ್ತಾರೆ. ಈ ರೀತಿ ಒಂದು, ಎರಡು ಕೋಟಿ ಅವ್ಯವಹಾರವಾದರೆ ಹೇಗೆ? ತಕ್ಷಣ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು: ಒಂದು ತಿಂಗಳು ಎಂದು ಹೇಳೀದ್ದಾರೆ.

ಶ್ರೀ ಎನ್ ಸಂಪಂಗಿ: ಆಯಿತು

ಶ್ರೀ ಡಿ ಕೆ ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಕನಕಪುರ ಟೌನ್‌ನಲ್ಲಿನ ಜನರು ಕಲುಷಿತ ಕುಡಿಯುವ ನೀರಿನಿಂದ ತೊಂದರೆಯಾಗಿದ್ದು ಇದರ ಬಗ್ಗೆ ನಾನು ಅರ್ಬನ್ ಡೆವಲಪ್‌ಮೆಂಟ್ ಸಚಿವರಲ್ಲಿ ಕೇಳಿದ್ದೇ. ಆದರೆ, ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಸಚಿವರಿಗೆ ಹೋಗಿದೆ. ಕನಕಪುರಕ್ಕೆ ಕುಡಿಯುವ ನೀರನ್ನು ಒದಗಿಸುವುದು ಅವರ ಕೈಯೆಲ್ಲೇನು ಇಲ್ಲ. ಆದ್ದರಿಂದ ಇದನ್ನು ಯು.ಡಿ. ಸಚಿವರಿಗೆ ಕೊಡಬೇಕು ಇಲ್ಲದಿದ್ದರೆ ಬಿಡಬ್ಲ್ಯೂಎಸ್‌ಎಸ್ ಸಚಿವರಿಗೆ ಕೊಡಬೇಕು. ಸರ್ಕಾರದ ಪರವಾಗಿ ಅವರು ಏನು ಉತ್ತರ ಕೊಡುತ್ತಾರೊ ಅದನ್ನು ಕೇಳಲು ನಾನು ತಯಾರಿದ್ದೇನೆ. ಇಲ್ಲದಿದ್ದರೆ ಅದನ್ನು ದಯವಿಟ್ಟು ಯು.ಡಿ. ಸಚಿವರಿಗೆ ವರ್ಗಾವಣೆ ಮಾಡಿಕೊಡಿ. ನಾನು Quality of water ಬಗ್ಗೆ ಚರ್ಚೆ ಮಾಡುತ್ತಿದ್ದೇನೆ.

ಅಧ್ಯಕ್ಷರು: ಆಗಬಹುದು.

ಶ್ರೀ ಎಸ್ ಸುರೇಶ್‌ಕುಮಾರ್ (ನಗರಾಭಿವೃದ್ಧಿ ಸಚಿವರು): ನಾನು ಕೊಡುತ್ತೇನೆ. ಈಗ ಮಾಡುತ್ತೇನೆ.

ಶ್ರೀ ಡಿ ಕೆ ಶಿವಕುಮಾರ್: ಈಗ ಮಾಡಲು ಆಗುತ್ತದೆಯೇ? Let it be transfer. ಅದನ್ನು ಯು.ಡಿ. ಅಥವಾ BWSS ಗೆ ವರ್ಗಾವಣೆ ಮಾಡಿಬಿಡಿ ಸ್ವಾಮಿ.

ಅಧ್ಯಕ್ಷರು: ಆಗಬಹುದು. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 5ನೇ ಜುಲೈ ಮಾಹೆ 2010ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಃಶ್ಚಯಿಸಿತು)

5. ಅನುಬಂಧ – ಅ:

ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳು

176(559) ಶ್ರೀ ಬಂಡೆಪ್ಪ ಕಾಶೆಂಪೂರ: (ಬೀದರ್ ದಕ್ಷಿಣ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರ್ವಜನಿಕ / ಖಾಸಗಿ ಸಹಭಾಗಿತ್ವದಲ್ಲಿ ಯೋಜನೆಗಳನ್ನು ರೂಪಿಸಲು ಕೃಷಿ ಮಾರುಕಟ್ಟೆ ಇಲಾಖೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಈ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;

ಇ) ಈ ಯೋಜನೆಯಿಂದ ಸಾರ್ವನಿಕರಿಗೆ ಆಗುವ ಉಪಯೋಗಗಳೇನು (ವಿವರ ನೀಡುವುದು)?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ ಸಾರ್ವಜನಿಕ / ಖಾಸಗಿ ಸಹಭಾಗಿತ್ವದಲ್ಲಿ ಯೋಜನೆಗಳನ್ನ ಅನುಷ್ಠಾನಗೊಳಿಸಲು ಈ ಇಲಾಖೆಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ.

ಆ) & ಇ) ಸರ್ಕಾರದ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ನೀಡಿರುವ ಮಾರ್ಗಸೂಚಿ ಮತ್ತು ನಿಯಮಗಳನ್ನು ಅನುಸರಿಸಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣಗಳಲ್ಲಿ ರೈತರಿಗೆ ಮತ್ತು ಪೇಟೆ ಕಾರ್ಯಕರ್ತರಿಗೆ ಮಾರಾಟ ಚಟುವಟಿಕೆಗಳೀಗೆ ಹೆಚ್ಚಿನ ಮೂಲಭೂತ ಸೌಲಭ್ಯಗಳು ಲಭ್ಯವಾಗುತ್ತವೆ.

ಸಕ್ಕರೆ ಕಾರ್ಖಾನೆ

177(319) ಡಾ:: ಬಗಲಿ ಸಾರ್ವಭೌಮ ಸಾತಗೌಡ: ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಮಾ ಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ಶಂಕು ಸ್ಥಾಪನೆಯನ್ನು ಎಂದು ನೆರವೇರಿಸಲಾಯಿತು;

ಆ) ಆ ಕಾರ್ಖಾನೆ ಈಗ ಯಾವ ಹಂತದಲ್ಲಿದೆ;